## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೇಂದ್ರ ಪುರಸ್ಕೃತ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ – ದ್ವಿದಳ ಧಾನ್ಯ ಮತ್ತು ನ್ಯೂಟ್ರಿ ಸಿರಿಧಾನ್ಯ ಯೋಜನೆಗಳಡಿ ದೃಡೀಕೃತ ಬೀಜೋತ್ಪಾದನೆಗೆ ಪ್ರೋತ್ಸಾಹಧನ ನೀಡುವ ಕಾರ್ಯಕ್ರಮ – ನೋಡಲ್ ಸಂಸ್ಥೆಗೆ ಅನುದಾನ ಬಿಡುಗಡೆ ಬಗ್ಗೆ.

ಓದಲಾಗಿದೆ: 1.ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:2-13/2018-NFSM, ದಿ:04.05.2018 & 28.11.2018.

2. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 2-13/2019-NFSM, ದಿನಾಂಕ:14.08.2019.

3. ಸರ್ಕಾರದ ಆದೇಶ ಸಂಖ್ಯೆ: ಕೃಇ 19 ಕೃಉಇ 2019, ಬೆಂಗಳೂರು, ದಿನಾಂಕ:18.07.2019

4. ಕೃಷಿ ಆಯುಕ್ತರ ಪತ್ರ ಸಂ:ಜಕೃನಿ(CSS)/NFSM/ ದೃ.ಬೀಜೋತ್ಪಾದನೆ/ ಪ್ರೋತ್ಸಾಹಧನ / 2019-20, ದಿ: 22.08.2019.

**ಪ್ರಸ್ತಾವನೆ:**

2019-20ನೇ ಸಾಲಿನ ಆಯವ್ಯಯ ಸಂಪುಟ-3ರಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ (NFSM) ಯೋಜನೆಯಡಿ ಲೆಕ್ಕ ಶೀರ್ಷಿಕೆ: 2401-00-102-0-08 ರಡಿ ಒಟ್ಟು ರೂ. 17477.00 ಲಕ್ಷ ಅನುದಾನ ನಿಗದಿಪಡಿಸಲಾಗಿರುತ್ತದೆ.

ಮೇಲೆ ಓದಲಾದ (1)ರ ಕೇಂದ್ರ ಸರ್ಕಾರದ ಪತ್ರದಲ್ಲಿ 2018-19 ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ- ದ್ವಿದಳ ಧಾನ್ಯ ಮತ್ತು ಸಿರಿಧಾನ್ಯ ಯೋಜನೆಗಳಡಿ ಅನುಷ್ಠಾನ ಮಾರ್ಗಸೂಚಿಗಳನ್ವಯ ಕ್ರಮವಾಗಿ ರೂ.5000/ಕ್ವಿಂಟಾಲ್ ಮತ್ತು ರೂ.3000/ಕ್ವಿಂಟಾಲ್‌ನಂತೆ ದೃಡೀಕೃತ ಬೀಜೋತ್ಪಾಧನೆಗೆ ಪ್ರೋತ್ಸಾಹಧನ ನೀಡಲು ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ.

ಮೇಲೆ ಓದಲಾದ (2)ರ ಕೇಂದ್ರ ಸರ್ಕಾರದ ಪತ್ರದಲ್ಲಿ 2018-19ನೇ ಸಾಲಿನಲ್ಲಿ ದ್ವಿದಳಧಾನ್ಯ ಮತ್ತು ಸಿರಿಧಾನ್ಯ ಯೋಜನೆಗಳಡಿ ದೃಡೀಕೃತ ಬೀಜೋತ್ಪಾಧನೆಗೆ ಪ್ರೋತ್ಸಾಹಧನ ನೀಡಲು ಬಾಕಿ ಇರುವ ಬದ್ದ ವೆಚ್ಚವನ್ನು 2019-20ನೇ ಸಾಲಿನ ಕ್ರಿಯಾ ಯೋಜನೆಯಡಿ ಭರಿಸಲು ಅನುಮೋದನೆ ನೀಡಲಾಗಿರುತ್ತದೆ.

ಮೇಲೆ ಓದಲಾದ (3)ರ ಸರ್ಕಾರದ ಆದೇಶದಲ್ಲಿ 2019-20 ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: **2401-00-102-0-08** ಅಡಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆ (NFSM) ಅನುಷ್ಠಾನಕ್ಕೆ ಒದಗಿಸಲಾಗಿರುವ ಅನುದಾನದಲ್ಲಿ NFSM- ಅಕ್ಕಿ, ದ್ವಿದಳ ಧಾನ್ಯ, ಒರಟು ಧಾನ್ಯ ಮತ್ತು ನ್ಯೂಟ್ರಿ ಸೀರಿಯಲ್ಸ್ ಕಾರ್ಯಕ್ರಮಕ್ಕೆ ಮೊದಲನೇ ಕಂತಿನ ಅನುದಾನ **ರೂ.8558.85 ಲಕ್ಷಗಳನ್ನು** ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ ಓದಲಾದ (4) ರ ಆಯುಕ್ತರು, ಕೃಷಿ ಇಲಾಖೆ ಇವರ ಪತ್ರದಲ್ಲಿ 2018-19ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ- ದ್ವಿದಳ ಧಾನ್ಯ ಮತ್ತು ಸಿರಿಧಾನ್ಯ ಯೋಜನೆಗಳಡಿ 10 ವರ್ಷಗಳಿಂದೀಚೆಗೆ ಬಿಡುಗಡೆಯಾಗಿರುವ ದ್ವಿದಳಧಾನ್ಯಗಳು ಮತ್ತು ಸಿರಿಧಾನ್ಯಗಳ ತಳಿಗಳ ದೃಢೀಕೃತ ಬಿತ್ತನೆ ಬೀಜೋತ್ಪಾದಕರಿಗೆ ಪ್ರೋತ್ಸಾಹಧನ ನೀಡಲು ನೋಡಲ್ ಸಂಸ್ಥೆಯಾಗಿರುವ ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ಲೆಕ್ಕ ಶೀರ್ಷಿಕೆ:2401-00-102-0-08 ರಡಿ ಒದಗಿಸಿರುವ ಅನುದಾನದಿಂದ ಸಹಾಯಾನುದಾನದ ಮೂಲಕ ಕೆಳಕಂಡಂತೆ ಬಿಡುಗಡೆ ಮಾಡಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವಂತೆ ಆಯುಕ್ತರು, ಕೃಷಿ ಇಲಾಖೆ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

(ಭೌ:ಪ್ರಮಾಣ – ಕ್ವಿಂಟಾಲ್‌ನಲ್ಲಿ, ಆರ್ಥಿಕ:ಪ್ರೋತ್ಸಾಹಧನ – ಲಕ್ಷ ರೂ.ಗಳಲ್ಲಿ)

| **ಕ್ರ.ಸಂ** | **ಎನ್.ಎಫ್.ಎಸ್.ಎಂ ಯೋಜನೆ** | **ಅನುಮೋದಿತ ವಾರ್ಷಿಕ ಕಾರ್ಯಕ್ರಮ** | | **ಪ್ರಗತಿ ವಿವರ** | |
|---|---|---|---|---|---|
| | | **ಭೌತಿಕ** | **ಆರ್ಥಿಕ** | **ಬೀಜೋತ್ಪಾದನಾ ಪ್ರಮಾಣ** | **ಒಟ್ಟು ಬೇಕಾಗುವ ಪ್ರೋತ್ಸಾಹಧನ** |
| 1 | ದ್ವಿದಳ ಧಾನ್ಯಗಳು | 36050 | 1802.50 | 27620.67 | 1381.04 |
| 2 | ನ್ಯೂಟ್ರಿ ಸಿರಿಧಾನ್ಯಗಳು | 8850 | 265.50 | 11088.99 | 332.670 |
| | **ಒಟ್ಟು** | **44900** | **2068.00** | **38709.66** | **1713.70** |

ಕೃಷಿ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 60 ಕೃಉಇ 2019, ಬೆಂಗಳೂರು, ದಿನಾಂಕ:27.09.2019**

2018-19 ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ- ದ್ವಿದಳ ಧಾನ್ಯ ಮತ್ತು ಸಿರಿಧಾನ್ಯ ಯೋಜನೆಗಳಡಿ 10 ವರ್ಷಗಳಿಂದೀಚೆಗೆ ಬಿಡುಗಡೆಯಾಗಿರುವ ದ್ವಿದಳಧಾನ್ಯಗಳು

File No.AGRI-AMS/60/2019-AGRI_PLAN_B-AGRICULTURE Secretariat

ಮತ್ತು ಸಿರಿಧಾನ್ಯಗಳ ತಳಿಗಳ ದೃಡೀಕೃತ ಬಿತ್ತನೆ ಬೀಜೋತ್ಪಾದಕರಿಗೆ ಪ್ರೋತ್ಸಾಹಧನ ನೀಡುವ ಸಲುವಾಗಿ ರೂ.1713.70 ಲಕ್ಷಗಳನ್ನು (ಒಂದು ಸಾವಿರದ ಏಳುನೂರ ಹದಿಮೂರು ಲಕ್ಷದ ಎಪ್ಪತ್ತು ಸಾವಿರ ರೂಪಾಯಿಗಳು ಮಾತ್ರ) ನೋಡಲ್ ಏಜೆನ್ಸಿಯಾದ ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ಸಹಾಯಾನುದಾನದ (GIA) ಮೂಲಕ ಬಿಡುಗಡೆ ಮಾಡಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ.

ಸದರಿ ವೆಚ್ಚವನ್ನು ಆಯವ್ಯಯ ಲೆಕ್ಕಶೀರ್ಷಿಕೆ: 2401–00–102–0–08 ಅಡಿ ಕೇಂದ್ರ ಪುರಸ್ಕೃತ NFSM- ಅಕ್ಕಿ, ದ್ವಿದಳ ಧಾನ್ಯ, ಒರಟು ಧಾನ್ಯ ಮತ್ತು ನ್ಯೂಟ್ರಿ ಸೀರಿಯಲ್ಸ್ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಲಾಗಿರುವ ಮೊದಲನೇ ಕಂತಿನ ಅನುದಾನದಿಂದ ಭರಿಸತಕ್ಕದ್ದು.

ಈ ಸಹಾಯಾನುಧಾನದ (GIA) ಬಿಲ್ಲನ್ನು ಮೇಲು ಸಹಿ ಮಾಡಿ ಪಾವತಿಸುವ ಅಧಿಕಾರವನ್ನು ಕೃಷಿ ನಿರ್ದೇಶಕರಿಗೆ ನೀಡಲಾಗಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್.ಡಿ/01/ಟಿಎಫ್‌ಪಿ/2019 ದಿ:03–04–2019 ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಆರ್ಥಿಕ ಅಧಿಕಾರದ ಮೇರೆಗೆ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಕೃಇ 38 ಆಂಆಸ 2019, ದಿನಾಂಕ:13.092019 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

BS Nagarathnam

**(ಬಿ.ಎಸ್.ನಾಗರತ್ನಮ್ಮ)**
**ಸರ್ಕಾರದ ಅಧೀನ ಕಾರ್ಯದರ್ಶಿ,**
**ಕೃಷಿ ಇಲಾಖೆ (ಯೋಜನೆ)**

27/9

ಇವರಿಗೆ:–

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು–01.
2. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಬೆಂಗಳೂರು.
3. ಸರ್ಕಾರಬ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.

4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.

5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.

6. ಕೃಷಿ ಆಯುಕ್ತರು,/ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.

7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ನಿಗಮ, ಬೆಂಗಳೂರು.

8. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.

9. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.

10. ನಿರ್ದೇಶಕರು, TNMC, ಖನಿಜ ಭವನ ಬೆಂಗಳೂರು.

11. ಸರ್ಕಾರದ ಅಧೀನ ಕಾರ್ಯದರ್ಶಿ (FR & CC), ಆರ್ಥಿಕ ಇಲಾಖೆ, ಬೆಂಗಳೂರು.

12. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ– 4&5), ಆರ್ಥಿಕ ಇಲಾಖೆ, ಬೆಂಗಳೂರು

13. ಆಂತರಿಕ ಆರ್ಥಿಕ ಸಲಹೆಗಾರರು ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು

14. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

*****